**ಓ ಎಸ್ ನಂಃ 104/2016**
**ಪಿ ಡಬ್ಲ್ಯು ಃ 2**

**ದಿಃ 28.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಸಿ ಎಂ ವಕೀಲರಿಂದಃ-**

ವಾದಿ ಮತ್ತು ಪ್ರತಿವಾದಿಗಳು ನಮ್ಮ ಗ್ರಾಮದ ವಾಸಿಗಳಾದ ಕಾರಣ ಅವರೆಲ್ಲರು ನನಗೆ ಗೊತ್ತು. ಈ ದಾವೆಯನ್ನು ಶಿವಾನಂದ್ ರವರು ತಿಮ್ಮೇಗೌಡರು ಮತ್ತು ಇತರರ ವಿರುದ್ದ ಸಲ್ಲಿಸಿರುತ್ತಾರೆ. ದಾವಾ ಸ್ವತ್ತು ಮೂಲತಃ ಗುರುನಂಜಾರಾಧ್ಯ ರವರಿಗೆ ಸೇರಿದ ಸ್ವತ್ತು. ಸದರಿ ವಿಚಾರವಾಗಿ ನಾನು ದಾಖಲಾತಿಯನ್ನು ನೋಡಿರುತ್ತೇನೆ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಗುರುನಂಜಾರಾಧ್ಯ ರವರಿಗೆ ಗೇಣಿ ಅರ್ಜಿಗೆ ಸಂಬಂಧಪಟ್ಟಂತೆ ಯಾವುದೇ ದಾಖಲೆ ಆಗಿಲ್ಲ ಎಂದರೆ ಸರಿಯಲ್ಲ. ಗುರುನಂಜಾರಾಧ್ಯ ರವರು ಗೇಣಿ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಆದ್ದರಿಂದ ತಾವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ಚೇರ್ ಮೆನ್ ರುದ್ರಪ್ಪನವರ ಜಮೀನು, ಪಶ್ಚಿಮಕ್ಕೆ ಅಮರನಾಥ ರವರ ಜಮೀನು, ಉತ್ತರಕ್ಕೆ ನಿಜಗುಣ ರವರ ಜಮೀನು, ದಕ್ಷಿಣಕ್ಕೆ ಹೊನ್ನಮ್ಮ ನವರ ಜಮೀನು. ನಾನು ಹುಟ್ಟಿದಾಗಿನಿಂದಲೂ ಸಹ ತಾವರೆಕೆರೆ ಗ್ರಾಮದಲ್ಲಿ ವಾಸವಾಗಿದ್ದೇನೆ. ದಾವಾ ಆಸ್ತಿಯನ್ನು ತಿಮ್ಮೇಗೌಡರು ಖರೀದಿ ಮಾಡಿರುವ ವಿಚಾರ ತಮಗೆ ಗೊತ್ತಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಮೂಲತಃ ಮಲ್ಲಪ್ಪನವರ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಬಗ್ಗೆ ತಮಗೆ ಸಂಪೂರ್ಣ ಮಾಹಿತಿ ಇಲ್ಲದಿದ್ದರೂ ಸಹ ತಾವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**

**ಓ ಎಸ್ ನಂಃ 104/2016**
**ಪಿ ಡಬ್ಲ್ಯೂ ಃ 3**

**ದಿಃ 28.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಸಿ ಎಂ ವಕೀಲರಿಂದಃ-**

ನಾನು ಇತ್ತೀಚೆಗೆ ದಾವಾ ಆಸ್ತಿಯನ್ನು ನೋಡಿರುತ್ತೇನೆ. ನಾನು ದಾವಾ ಆಸ್ತಿಯನ್ನು 30 ವರ್ಷಗಳಿಂದ ನೋಡಿರುತ್ತೇನೆ. ಇತ್ತೀಚಿನ ದಿನಗಳಲ್ಲಿ ಪ್ರತಿವಾದಿ 7(ಬಿ) ಶ್ರೀನಿವಾಸರವರು ದಾವಾ ಆಸ್ತಿಗೆ ಬೇಲಿಯನ್ನು ಹಾಕಿಸಿದ್ದಾರೆ ಎಂದರೆ ಸರಿ. ದಾವಾ ಆಸ್ತಿಯನ್ನು ಈ ಹಿಂದೆ ಪ್ರತಿವಾದಿ 7(ಬಿ) ರವರ ತಂದೆರವರು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಎಷ್ಟು ವರ್ಷಗಳ ಹಿಂದೆ ವ್ಯವಸಾಯದ ಕಾರ್ಯವನ್ನು ನಿಲ್ಲಿಸಿದ್ದಾರೆ ಎಂದರೆ ಸಾಕ್ಷಿಯು ದಾವಾ ಸ್ವತ್ತಿನಲ್ಲಿ ನೀಲಗಿರಿ ಮರಗಳನ್ನು ಬೆಳೆದಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಚಕ್ಕುಬಂದಿ ಪೂರ್ವದ ಕಡೆ ರುದ್ರಪ್ಪನವರ ಜಮೀನು, ಪಶ್ಚಿಮದ ಕಡೆ ಅಮರನಾಥರವರ ಜಮೀನು, ಉತ್ತರಕ್ಕೆ ವಿಜಯ್ ರವರ ಜಮೀನು, ದಕ್ಷಿಣಕ್ಕೆ ಹೊನ್ನಮ್ಮನವರ ಜಮೀನು. ದಾವಾ ಆಸ್ತಿಯು ಯಾರ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಬಗ್ಗೆ ತಮಗೆ ಏನೇನು ಗೊತ್ತಿಲ್ಲದಿದ್ದರೂ ಸಹ ತಾವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**